‘ನಿಂದು ಚಿತ್ರ ಚೆನ್ನಾಗಿ ಬರುತ್ತೆ, ಅದಾಗಲೆ ನನಗೆ ಗೊತ್ತಿತ್ತು...’ ಅನ್ನುತ್ತ ಕುರ್ಚಿಯಲ್ಲಿ ಹಿಂದಕ್ಕೊರಗಿ, ‘ನೋಡು ಸುರಭಿ, ಏನೂ ಹೆದ್ರಿಕೋಬೇಡ. ಅಭಿನಯ ಅಂದ್ರೆ ಹೀಗೇ ಅಂತ ಪುಸ್ತಕದ ಫಾರ್ಮುಲಾ ಅಲ್ಲ. ಅಥವಾ ಅನುಕರಣೆನೂ ಅಲ್ಲ. ಸಂದರ್ಭಗಳು ಬಂದಾಗ ನಾನು, ನೀನು ಎಲ್ರೂ ಸಹಜವಾಗಿ ಅದಕ್ಕೆ ತಕ್ಕ ಪ್ರತಿಕ್ರಿಯೆ ನೀಡತೀವಿ. ಇದು ಪ್ರತಿದಿನ, ಪ್ರತಿಕ್ಷಣ ನಡೀತಾನೆ ಇರುತ್ತೆ. ಅದನ್ನೇ ಇಲ್ಲಿ ಅಂತಹ ಸಂದರ್ಭವನ್ನು ನೈಜವಾಗಿ ಕಲ್ಪಿಸಿಕೊಂಡು ಪ್ರತಿಕ್ರಿಯಿಸಿದರಾಯ್ತು. ಉದಾಹರಣೆಗೆ ಕಾಫಿಕುಡಿ ಅಂದರೆ ನಿತ್ಯ ನೀನು ಹೇಗೆ ಕುಡೀತಿಯೋ ಹಾಗೆ ಹೊರತು ಅದಕ್ಕೇಂತ ಸ್ಪೆಷಲ್ ಪೋಸಿಲ್ಲ... ತಿಳೀತಾ?’ ಅಂತ ವಿವರಣೆ ಕೊಡುತ್ತಾಹೋದರು. ಸುರಭಿಯ ಆತಂಕ ಕಮ್ಮಿಯಾಯ್ತು. ಆತ್ಮವಿಶ್ವಾಸ ತುಂಬಿಕೊಳ್ಳತೊಡಗಿತು. ಶೂಟಿಂಗ್‌ಸ್ಕ್ರಿಪ್ಟ್ ತರಿಸಿ ಚಿತ್ರಕತೆಯ ವಿವರಣೆ ಕೊಟ್ಟರು. ಜಯರಾಂದೆಲ್ಲ ಪ್ರಯೋಗಶೀಲ ಚಿತ್ರಗಳು, ಮಾಮೂಲು ಕಮರ್ಷಿಯಲ್ ಸೂತ್ರಗಳಿಗೆ ಜೋತುಬಿದ್ದವರಲ್ಲ. ಅದಕ್ಕೇ ಸುಪ್ರಸಿದ್ಧ ನಟನಟಿಯರ ಹಿಂದೆ ಹೋಗುವವರಲ್ಲ. ಹೊಸಬರಲ್ಲಿ ತಮ್ಮ ಚಿಂತನೆಗೆ ತಕ್ಕ ಅಭಿನಯ, ಭಾವಗಳನ್ನು ಹೊರಡಿಸಬಹುದು. ಸುಪ್ರಸಿದ್ಧರು ತಮ್ಮದೇ ಪೋಸು, ಛಾಪಿನ ಚಟದವರು ಅಂತ ಅವರ ಅನುಭವ. ಇದೊಂದು ಬುಡಕಟ್ಟು ಜನಾಂಗದ ಹುಡುಗಿಯ ಕತೆ. ಕುಲದವರ ಕಟ್ಟುಪಾಡು, ಮೂಢನಂಬಿಕೆಗಳನ್ನೆದುರಿಸುತ್ತ, ಜನ್ಮಜಾತವಾಗಿ ಬಂದ ಬುಡಕಟ್ಟಿನ ವಿಶಿಷ್ಟ ಚಿತ್ರಕಲೆಯೊಂದನ್ನು ಬೆಳೆಸಿಕೊಂಡು, ನಾಗರಿಕ ಪ್ರಪಂಚದ ಪಟ್ಟಭದ್ರರನ್ನು ಎದುರುಹಾಕಿಕೊಂಡು, ಹೊರಜಗತ್ತಿಗೆ ತರೆದುಕೊಳ್ಳುತ್ತಾ ಪ್ರಸಿದ್ಧಳಾಗುವ ಕತೆ. ಇನ್ನಷ್ಟು ಪುರುಷ, ಸ್ತ್ರೀ ಪಾತ್ರಗಳಿದ್ದವು. ಸುರಭಿಯದು ನಾಯಕಿಯ ಪಾತ್ರ. ನಾಯಕನಿದ್ದರೂ ಚಿತ್ರ ನಾಯಕಿ ಪ್ರಧಾನವಾಗಿತ್ತು. ‘...ನಮ್ಮದು ಅಟಾಟೋಪದ ಕಮರ್ಷಿಯಲ್ ಚಿತ್ರವಲ್ಲ. ಬಜೆಟ್ಟು ತೀರಾ ದೊಡ್ಡದಿರೋಲ್ಲ. ಲೊಕೇಶನ್ನು, ಕಾಸ್ಟ್ಯೂಮು, ಸೆಟ್ಟುಗಳಲ್ಲಿ ನಾವು ಹೊಂದಾಣಿಕೆ ಮಾಡ್ಕೊಳಲ್ಲ. ಸುಮಾರು ಖರ್ಚು ಅದಕ್ಕೆ ಹೋಗುತ್ತೆ. ನಿನಗೆ ನಾನು ಐವತ್ತುಸಾವಿರ ಕೊಡತೀನಿ. ನಟಿ ಅನಿಸ್ಕೊಂಡ ಮೇಲೆ ಬೇಡಿಕೆಗನುಸಾರ ನಿನ್ನ ರೇಟನ್ನ ಎಷ್ಟಾದರೂ ಏರಿಸ್ಕೊಳ್ತಾ ಹೋಗಬಹುದು, ಅದು ಭವಿಷ್ಯದ್ದು. ಈ ಚಿತ್ರ ಮುಗಿಯೋವರೆಗೂ ಯಾವ ಕಾರಣಕ್ಕೂ ಬಿಟ್ಟುಹೋಗೋ ಹಾಗಿಲ್ಲ...’ ಅಂದರು. ಒಪ್ಪಿಕೊಂಡಳು. ಅಗ್ರೀಮೆಂಟು ಪೇಪರು ತಯಾರಾಯ್ತು. ಎರಡುಮೂರು ಕಡೆ ಸಹಿ ಮಾಡಿಸಿಕೊಂಡು ಇಪ್ಪತ್ತುಸಾವಿರ ಅಡ್ವಾನ್ಸು ಕೊಟ್ಟರು. ಸಿಹಿ, ಖಾರ, ಕಾಫಿ ಹಂಚಿದರು. ‘ನಿಂಗೆ ಕಾಲುಶೀಟುಗಳನ್ನ ಕೊಡತೀವಿ, ಅದ್ರಲ್ಲಿ ಯಾವ ಸೀನು, ಯಾವ ದಿನಾಂಕ, ಸಮಯ, ಲೊಕೇಶನ್ನು ವಿವರ ಎಲ್ಲಾ ಇರುತ್ವೆ. ನಿಗದಿಯಾದ ಸಮಯಕ್ಕೆ ಸ್ಟಾಟಿನಲ್ಲಿ ಮೇಕಪ್ಪಿಗೆ ಹಾಜರಿರ್ಬೇಕು. ಊಟ ತಿಂಡೀದು, ಕಾಸ್ಟ್ಯೂಮ್ದು ಎಲ್ಲಾ ಖರ್ಚು ಪ್ರಾಜೆಕ್ಟದು. ಪಿಕಪ್‌ವಾಹನವನ್ನು ವಿಳಾಸಕ್ಕೆ ಕಳಿಸ್ತೀವಿ. ಫೋನ್‌ಸಂಪರ್ಕದಲ್ಲಿರು.’ ವಿವರಣೆ ಕೊಟ್ಟರು.

ಅವೊತ್ತು ವಿಚಿತ್ರ ಮನಸ್ಥಿತಿಯಲ್ಲಿದ್ದಳು. ಒಂದು ತಿಂಗಳಲ್ಲಿ ಏನೆಲ್ಲಾ ನಡೆದುಹೋಗಿತ್ತು! ಕೊನೆಗೂ ಸಿನಿಮಾ ನಾಯಕಿಯ ಪಾತ್ರಕ್ಕೇರಿದ್ದಳು. ದುಗುಡ, ಕಹಿ, ಸಿಹಿ, ಸಂಭ್ರಮ, ಬೇಗುದಿ, ರಹಸ್ಯ ಎಲ್ಲ ಗಿಡಿದಿಟ್ಟುಕೊಂಡು ಬಲೂನಿನಂತೆ ಸಿಡಿದುಬಿಡುವ ಒತ್ತಡದ ಮನಸ್ಸು. ಇನ್ನು ಸರಿಯಲ್ಲ ಅನಿಸಿತು. ರಾತ್ರಿ ಊಟಮುಗಿಸಿ ದೀಪವಾರಿಸಿದ ಕತ್ತಲಲ್ಲಿ ಮಾತು ಸುರುಮಾಡಿದಳು. ತನ್ನ ಊರು ಮನೆ, ತನ್ನ ಲಾವಣ್ಯದ ಬಗ್ಗೆ ತನಗಿದ್ದ ಭಾವನೆ, ತಾನು ಸುಬ್ಬಿಯಿಂದ ಸುರಭಿಯಾದದ್ದು, ಸುಳ್ಳಿನ ಪಯಣದಲ್ಲಿ ಬೆಂಗಳೂರು ಸೇರಿದ್ದು, ಇಲ್ಲಿ ಪಟ್ಟ ಬವಣೆ, ಎಲ್ಲ ಮೊಗೆದುಮೊಗೆದು ಮುಗಿಸುತ್ತಾ ಖಾಲಿಯಾಗುವ ಎದೆಯ ಭಾರ ಗಂಟಲಿಗೇರಿ, ನನ್ನ